ಸೂ. 28 — **72. ಅಲ್ ಜಿನ್ನ್** — ರು. 2

اٰیاتها ٢٨ — سُوْرَةُ الْجِنِّ مَكِّيَّةٌ — رُكُوْعَاتُهَا ٢

72. ಅಲ್ ಜಿನ್ನ್

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ۝

1. ಸಂದೇಶವಾಹಕರೇ, ಹೇಳಿರಿ- ನನ್ನ ಕಡೆಗೆ 'ದಿವ್ಯವಾಣಿ' ಮಾಡಲಾಗಿದೆ (ಏನೆಂದರೆ)- ಯಕ್ಷಗಳ ಒಂದು ತಂಡವು ಶ್ರದ್ಧೆಯಿಂದ ಆಲಿಸಿತು.[1] ತರುವಾಯ (ತನ್ನ ಜನಾಂಗದ ಬಳಿಗೆ ಹೋಗಿ) ಹೀಗೆ ಹೇಳಿತು- "ನಾವು ಒಂದು ಅತ್ಯದ್ಭುತ ಕುರ್‌ಆನನ್ನು ಆಲಿಸಿದ್ದೇವೆ.

قُلْ اُوْحِيَ اِلَيَّ اَنَّهُ اسْتَمَعَ نَفَرٌ مِّنَ الْجِنِّ فَقَالُوْۤا اِنَّا سَمِعْنَا قُرْاٰنًا عَجَبًا ۝١

2. ಅದು ಸನ್ಮಾರ್ಗದ ಕಡೆಗೆ ಮಾರ್ಗದರ್ಶನ ಮಾಡುತ್ತದೆ. ಆದುದರಿಂದ ನಾವು ಅದರ ಮೇಲೆ ವಿಶ್ವಾಸವಿರಿಸಿದೆವು ಮತ್ತು ನಾವಿನ್ನು ಎಷ್ಟು ಮಾತ್ರಕ್ಕೂ ನಮ್ಮ ಪ್ರಭುವಿನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡಲಾರೆವು."

يَّهْدِيْۤ اِلَى الرُّشْدِ فَاٰمَنَّا بِهٖ ؕ وَلَنْ نُّشْرِكَ بِرَبِّنَاۤ اَحَدًا ۝٢

3. ಅಲ್ಲದೆ, "ನಮ್ಮ ಪ್ರಭುವಿನ ಪ್ರತಿಷ್ಠೆಯು ಅತ್ಯುನ್ನತವಾಗಿದೆ. ಅವನು ಯಾರನ್ನೂ ತನ್ನ ಪತ್ನಿ ಅಥವಾ ಪುತ್ರನಾಗಿ ಮಾಡಿಕೊಂಡಿಲ್ಲ-"

وَّاَنَّهٗ تَعٰلٰى جَدُّ رَبِّنَا مَا اتَّخَذَ صَاحِبَةً وَّلَا وَلَدًا ۝٣

4. ಅಲ್ಲದೆ, "ನಮ್ಮಲ್ಲಿನ ತಿಳಿಗೇಡಿಗಳು[2] ಅಲ್ಲಾಹನ ವಿಷಯದಲ್ಲಿ ಘೋರ ಅಸತ್ಯವನ್ನು ಹೇಳುತ್ತಿರುತ್ತಾರೆ."

وَّاَنَّهٗ كَانَ يَقُوْلُ سَفِيْهُنَا عَلَى اللّٰهِ شَطَطًا ۝٤

---

1. ಇದರಿಂದ ವ್ಯಕ್ತವಾಗುವುದೇನೆಂದರೆ, ಆ ಸಂದರ್ಭದಲ್ಲಿ ಪ್ರವಾದಿವರ್ಯರಿಗೆ(ಸ) ಜಿನ್ನ್(ಯಕ್ಷ)ಗಳು ಕಾಣಿಸುತ್ತಿರಲಿಲ್ಲ. ಅವರು ಕುರ್‌ಆನ್ ಕೇಳುತ್ತಿದ್ದರೆಂದೂ ಅವರಿಗೆ ತಿಳಿದಿರಲಿಲ್ಲ. ಅನಂತರ ದಿವ್ಯವಾಣಿಯ ಮೂಲಕ ಅಲ್ಲಾಹನು ಅವರಿಗೆ ಈ ಘಟನೆಯ ಸುದ್ದಿ ತಲುಪಿಸಿದನು. ಹ.ಅಬ್ದುಲ್ಲಾ ಬಿನ್ ಅಬ್ಬಾಸ್ ಕೂಡ ಈ ಘಟನೆಯ ಬಗ್ಗೆ ಸ್ಪಷ್ಟೀಕರಣ ನೀಡುತ್ತಾ ಹೀಗೆನ್ನುತ್ತಾರೆ, "ಪ್ರವಾದಿವರ್ಯರು(ಸ) ಜಿನ್ನ್‌ಗಳ ಮುಂದೆ ಕುರ್‌ಆನ್ ಓದಿರಲಿಲ್ಲ ಮತ್ತು ಅವರನ್ನು ನೋಡಿರಲಿಲ್ಲ" (ಮುಸ್ಲಿಮ್, ತಿರ್ಮಿದಿ, ಮುಸ್ನದ್ ಅಹ್ಮದ್, ಇಬ್ನ್‌ಜರೀರ್)
2. ಮೂಲದಲ್ಲಿ 'ಸಫೀಹುನಾ' ಎಂಬ ಪದ ಪ್ರಯೋಗವಾಗಿದೆ. ಈ ಪದವನ್ನು ಒಬ್ಬ ವ್ಯಕ್ತಿಗೂ ಅಂತೆಯೇ ಒಂದು ಸಮೂಹಕ್ಕೂ ಪ್ರಯೋಗಿಸಬಹುದಾಗಿದೆ. ಇದನ್ನು ತಿಳಿಗೇಡಿ ವ್ಯಕ್ತಿ ಎಂದು ಅರ್ಥೈಸುವುದಾದರೆ ಈ ಪದ 'ಇಬ್ಲೀಸ್'ಗೆ ಅನ್ವಯವಾಗುವುದು. ಇದನ್ನು ಒಂದು ಸಮೂಹ ಎಂದು ಕಲ್ಪಿಸುವುದಾದರೆ ಜಿನ್ನ್‌ಗಳ ಪೈಕಿಯ ಮೂರ್ಖ ಮತ್ತು ಬುದ್ಧಿಹೀನರಾದ ಅನೇಕರು ಈ ಮಾತು ಹೇಳುತ್ತಿದ್ದರು ಎಂದಾಗುತ್ತದೆ.

5. ಅಲ್ಲದೆ, "ಮಾನವರು ಮತ್ತು ಯಕ್ಷಗಳು ಅಲ್ಲಾಹನ ವಿಷಯದಲ್ಲಿ ಎಂದೂ ಸುಳ್ಳು ಹೇಳಲಾರರೆಂದು ನಾವು ಭಾವಿಸಿಕೊಂಡಿದ್ದೆವು."

وَّاَنَّا ظَنَنَّآ اَنْ لَّنْ تَقُوْلَ الْاِنْسُ
وَالْجِنُّ عَلَى اللّٰهِ كَذِبًا ٥

6. ಅಲ್ಲದೆ, "ಮಾನವರ ಪೈಕಿ ಕೆಲವರು ಯಕ್ಷಗಳ ಪೈಕಿ ಕೆಲವರ ಅಭಯ ಯಾಚಿಸುತ್ತಿದ್ದರು. ಹೀಗೆ ಅವರು ಯಕ್ಷಗಳ ಅಹಂಕಾರ ವನ್ನು ಇನ್ನಷ್ಟು ಹೆಚ್ಚಿಸಿದರು."

وَّاَنَّهٗ كَانَ رِجَالٌ مِّنَ الْاِنْسِ يَعُوْذُوْنَ
بِرِجَالٍ مِّنَ الْجِنِّ فَزَادُوْهُمْ رَهَقًا ٦

7. ಅಲ್ಲದೆ, "ಮಾನವರು ಕೂಡಾ ನಿಮ್ಮಂತೆಯೇ ಅಲ್ಲಾಹನು ಯಾರನ್ನೂ ಸಂದೇಶವಾಹಕನಾಗಿ ಕಳುಹಿಸುವುದಿಲ್ಲವೆಂದು ಭಾವಿಸಿ ಕೊಂಡಿದ್ದರು."

وَّاَنَّهُمْ ظَنُّوْا كَمَا ظَنَنْتُمْ اَنْ لَّنْ
يَّبْعَثَ اللّٰهُ اَحَدًا ٧

8. ಅಲ್ಲದೆ, "ನಾವು ಆಕಾಶವನ್ನು ಹುಡುಕಾಡಿದಾಗ, ಅದು ಕಾವಲು ಗಾರರಿಂದ ತುಂಬಿರುವುದನ್ನು ಮತ್ತು ಉಲ್ಕೆಗಳ ಮಳೆ ಸುರಿಯುತ್ತಿರುವುದನ್ನು ಕಂಡೆವು-"

وَّاَنَّا لَمَسْنَا السَّمَآءَ فَوَجَدْنٰهَا مُلِئَتْ
حَرَسًا شَدِيْدًا وَّشُهُبًا ٨

9. ಅಲ್ಲದೆ, "ಹಿಂದೆ ನಾವು ಕದ್ದಾಲಿಸಲಿಕ್ಕಾಗಿ ಆಕಾಶದಲ್ಲಿ ಕೂರಲು ಸ್ಥಳ ಪಡೆಯುತ್ತಿದ್ದೆವು. ಆದರೆ ಈಗ ಕದ್ದಾಲಿಸಲು ಪ್ರಯತ್ನಿಸು ವವನು ತನಗಾಗಿ ಒಂದು ಉಲ್ಕೆಯು ಹೊಂಚು ಹಾಕುತ್ತಿರುವು ದನ್ನು ಕಾಣುತ್ತಾನೆ-"

وَّاَنَّا كُنَّا نَقْعُدُ مِنْهَا مَقَاعِدَ لِلسَّمْعِ ۗ
فَمَنْ يَّسْتَمِعِ الْاٰنَ يَجِدْ لَهٗ
شِهَابًا رَّصَدًا ٩

10. ಅಲ್ಲದೆ, "ಭೂಮಿಯ ನಿವಾಸಿಗಳೊಂದಿಗೆ ಏನಾದರೂ ಕೆಟ್ಟ ವ್ಯವಹಾರ ಮಾಡಲು ನಿರ್ಧರಿಸಲಾಗಿದೆಯೋ ಅಥವಾ ಅವರ ಪ್ರಭುವು ಅವರಿಗೆ ಸನ್ಮಾರ್ಗವನ್ನು ತೋರಿಸ ಬಯಸಿರುವನೋ ಎಂಬುದು ನಮಗೆ ಅರ್ಥವಾಗುತ್ತಿರಲಿಲ್ಲ."[3]

وَّاَنَّا لَا نَدْرِيْٓ اَشَرٌّ اُرِيْدَ بِمَنْ
فِى الْاَرْضِ اَمْ اَرَادَ بِهِمْ رَبُّهُمْ رَشَدًا ١٠

11. ಅಲ್ಲದೆ, "ನಮ್ಮಲ್ಲಿ ಕೆಲವರು ಸಜ್ಜನರಿದ್ದಾರೆ ಮತ್ತೆ ಕೆಲವರು ಅದಕ್ಕಿಂತ ಕೆಳಮಟ್ಟದವರಾಗಿದ್ದಾರೆ. ನಾವು ನಾನಾ ಪದ್ಧತಿಗಳಲ್ಲಿ ಹರಿಹಂಚಿ ಹೋಗಿದ್ದೇವೆ-

وَّاَنَّا مِنَّا الصّٰلِحُوْنَ وَمِنَّا دُوْنَ
ذٰلِكَ ۗ كُنَّا طَرَاۤىِٕقَ قِدَدًا ١١

12. ಅಲ್ಲದೆ, ನಾವು ಭೂಮಿಯಲ್ಲಿಯೂ ಅಲ್ಲಾಹನನ್ನು ಸೋಲಿಸ ಲಾರೆವು ಮತ್ತು ಓಡಿ ಹೋಗಿಯೂ ಅವನನ್ನು ಸೋಲಿಸಲಾರೆವು ಎಂದು ನಾವು ತಿಳಿದು ಕೊಂಡಿದ್ದೆವು."[4]

وَّاَنَّا ظَنَنَّآ اَنْ لَّنْ نُّعْجِزَ اللّٰهَ فِى
الْاَرْضِ وَلَنْ نُّعْجِزَهٗ هَرَبًا ١٢

3. ಇದರಿಂದ ತಿಳಿದು ಬರುವುದೇನೆಂದರೆ ಈ ಜಿನ್ನ್‌ಗಳು ಭೂಮಿಯಲ್ಲಿ ಅಂತಹ ಯಾವ ಘಟನೆ ಸಂಭವಿಸಿದೆ, ಅದಾವ ಸುದ್ದಿಯನ್ನು ಗೌಪ್ಯವಾಗಿಡಲಿಕ್ಕಾಗಿ ಗಗನ ಲೋಕದಲ್ಲಿ ಯಾವುದೇ ವಿಷಯವನ್ನು ಕದ್ದು ಕೇಳಲು ಆಸ್ಪದವೇ ಇಲ್ಲದಂತಹ ವ್ಯವಸ್ಥೆ ಮಾಡಲಾಗಿದೆ, ಗಗನ ಲೋಕದ ಯಾವ ದಿಕ್ಕಿಗೆ ಹೋದರೂ ಯಾಕೆ ನಮ್ಮನ್ನು ಹೊಡೆದೋಡಿಸಲಾಗುತ್ತಿದೆ- ಎಂದು ಆಕಾಶದ ಈ ಸ್ವರೂಪವನ್ನು ಕಂಡು ಅವರು ಸತ್ಯವನ್ನರಸುತ್ತಾ ಹೊರಟಿದ್ದರು.

13. ಅಲ್ಲದೆ, "ನಾವು ಸನ್ಮಾರ್ಗದ ಬೋಧನೆಯನ್ನು ಕೇಳಿದಾಗ ಅದರ ಮೇಲೆ ವಿಶ್ವಾಸವಿರಿಸಿದೆವು. ಇನ್ನು ತನ್ನ ಪ್ರಭುವಿನ ಮೇಲೆ ಯಾರು ವಿಶ್ವಾಸವಿರಿಸುವನೋ ಅವನಿಗೆ ಯಾವುದೇ ಹಕ್ಕುಚ್ಯುತಿ ಅಥವಾ ಅನ್ಯಾಯದ ಭಯವಿರಲಾರದು."

وَّاَنَّا لَمَّا سَمِعْنَا الْهُدٰٓى اٰمَنَّا بِهٖ ؕ فَمَنْ يُّؤْمِنْۢ بِرَبِّهٖ فَلَا يَخَافُ بَخْسًا وَّلَا رَهَقًا ﴿۱۳﴾

14. ಅಲ್ಲದೆ, "ನಮ್ಮಲ್ಲಿ ಕೆಲವು ಮುಸ್ಲಿಮರು (ಅಲ್ಲಾಹನಿಗೆ ವಿಧೇಯರಾದವರು) ಇದ್ದಾರೆ, ಇನ್ನು ಕೆಲವರು ಸತ್ಯದಿಂದ ವಿಮುಖರಾಗಿದ್ದಾರೆ. ಇಸ್ಲಾಮನ್ನು (ಆಜ್ಞಾಪಾಲನೆಯ ಮಾರ್ಗವನ್ನು) ಸ್ವೀಕರಿಸಿಕೊಂಡವರು ಮೋಕ್ಷ ಮಾರ್ಗವನ್ನು ಕಂಡುಕೊಂಡರು-

وَّاَنَّا مِنَّا الْمُسْلِمُوْنَ وَمِنَّا الْقٰسِطُوْنَ ؕ فَمَنْ اَسْلَمَ فَاُولٰٓئِكَ تَحَرَّوْا رَشَدًا ﴿۱۴﴾

15. ಮತ್ತು ಸತ್ಯದಿಂದ ವಿಮುಖರಾದವರು ನರಕದ ಇಂಧನವಾಗುವರು-"[5]

وَاَمَّا الْقٰسِطُوْنَ فَكَانُوْا لِجَهَنَّمَ حَطَبًا ﴿۱۵﴾

16. (ಸಂದೇಶವಾಹಕರೇ, ನನಗೆ ಹೀಗೆಯೂ 'ದಿವ್ಯಬೋಧನೆ' ಮಾಡಲಾಗಿದೆಯೆಂದು ಹೇಳಿರಿ:) ಜನರು ಸನ್ಮಾರ್ಗದಲ್ಲಿ ಸ್ಥಿರಚಿತ್ತರಾಗಿ ನಡೆಯುತ್ತಿದ್ದರೆ, ನಾವು ಅವರನ್ನು ಜಲಸಮೃದ್ಧರನ್ನಾಗಿ ಮಾಡಿಬಿಡುತ್ತಿದ್ದೆವು-

وَّاَنْ لَّوِ اسْتَقَامُوْا عَلَى الطَّرِيْقَةِ لَاَسْقَيْنٰهُمْ مَّآءً غَدَقًا ﴿۱۶﴾

17. ಈ ಅನುಗ್ರಹದ ಮೂಲಕ ಅವರನ್ನು ಪರೀಕ್ಷಿಸಲಿಕ್ಕಾಗಿ. ಇನ್ನು ಯಾರು ತನ್ನ ಪ್ರಭುವಿನ ಸ್ಮರಣೆಯಿಂದ ವಿಮುಖನಾಗುವನೋ, ಅವನನ್ನು ಅವನ ಪ್ರಭುವು ಕಠಿಣ ಯಾತನೆಗೆ ಗುರಿಪಡಿಸುವನು-

لِّنَفْتِنَهُمْ فِيْهِ ؕ وَمَنْ يُّعْرِضْ عَنْ ذِكْرِ رَبِّهٖ يَسْلُكْهُ عَذَابًا صَعَدًا ﴿۱۷﴾

18. ಮತ್ತು ಮಸೀದಿಗಳು ಅಲ್ಲಾಹನಿಗಾಗಿವೆ. ಆದುದರಿಂದ ಅವುಗಳಲ್ಲಿ ಅಲ್ಲಾಹನೊಂದಿಗೆ ಇತರ ಯಾರನ್ನೂ ಪ್ರಾರ್ಥಿಸಬೇಡಿರಿ-[6]

وَّاَنَّ الْمَسٰجِدَ لِلّٰهِ فَلَا تَدْعُوْا مَعَ اللّٰهِ اَحَدًا ﴿۱۸﴾

---

4. ಅರ್ಥಾತ್- ನಮ್ಮ ಈ ಭಾವನೆಯೇ ನಮಗೆ ಮೋಕ್ಷದ ಮಾರ್ಗ ತೋರಿತು. ನಾವು ಅಲ್ಲಾಹನ ಬಗ್ಗೆ ನಿರ್ಭಯರಾಗಿರಲಿಲ್ಲ. ಆಜ್ಞೋಲ್ಲಂಘನೆ ಮಾಡಿದರೆ ಅವನ ಹಿಡಿತದಿಂದ ರಕ್ಷಿತರಾಗಲು ಸಾಧ್ಯವಿಲ್ಲವೆಂದು ನಮಗೆ ಖಾತ್ರಿಯಿತ್ತು. ಆದ್ದರಿಂದ ಅಲ್ಲಾಹನ ವತಿಯಿಂದ ಸನ್ಮಾರ್ಗ ತೋರಲು ಬಂದ ವಾಣಿಯನ್ನು ಕೇಳಿದಾಗ, ಸತ್ಯ ಬಯಲಾದ ನಂತರವೂ, ನಮ್ಮ ಪೈಕಿಯ ಅಜ್ಞಾನಪೀಡಿತ ಜನರು ಹರಡಿಬಿಟ್ಟಿದ್ದ ವಿಶ್ವಾಸಾಚಾರಗಳಲ್ಲಿ ನೆಲೆನಿಂತಿರುವ ಭಂಡ ಧೈರ್ಯ ತೋರಲು ನಮಗೆ ಸಾಧ್ಯವಿರಲಿಲ್ಲ.

5. ಕುರ್‌ಆನಿನ ಪ್ರಕಾರ ಯಕ್ಷಗಳು ಸ್ವತಃ ಅಗ್ನಿಯಿಂದ ಸೃಷ್ಟಿಸಲ್ಪಟ್ಟವರು. ಹಾಗಿರುವಾಗ ನರಕಾಗ್ನಿ ಅವರನ್ನು ಯಾವ ರೀತಿ ಬಾಧಿಸೀತು ಎಂಬ ಪ್ರಶ್ನೆ ಇಲ್ಲಿ ಉದ್ಭವಿಸಬಹುದು. ಇದಕ್ಕೆ ಉತ್ತರವೇನೆಂದರೆ ಪವಿತ್ರ ಕುರ್‌ಆನಿನ ಪ್ರಕಾರ ಮಾನವನೂ ಮಣ್ಣಿನಿಂದಲೇ ಸೃಷ್ಟಿಸಲ್ಪಟ್ಟಿದ್ದಾನೆ, ಹಾಗಿರುವಾಗ ಮಣ್ಣಿನ ಹೆಂಟೆಯ ಮೂಲಕ ಹೊಡೆದರೆ ಅವನಿಗೆ ನೋವುಂಟಾಗುವುದು ಹೇಗೆ?

6. ಅರ್ಥಾತ್- ಅಲ್ಲಾಹನ ಜತೆ ಬೇರೆ ಯಾರ ದಾಸ್ಯ-ಆರಾಧನೆಯನ್ನೂ ಮಾಡದಿರಿ. ಬೇರೆ ಯಾರಲ್ಲಿಯೂ ಪ್ರಾರ್ಥಿಸದಿರಿ. ಸಹಾಯಕ್ಕಾಗಿ ಬೇರೆ ಯಾರನ್ನೂ ಕೂಗಿ ಕರೆಯದಿರಿ.

19. ಅಲ್ಲಾಹನ ದಾಸನು ಅವನನ್ನು ಪ್ರಾರ್ಥಿಸಲಿಕ್ಕಾಗಿ ನಿಂತಾಗ, ಜನರು ಅವನ ಮೇಲೆ ಮುಗಿಬೀಳಲು ಸಿದ್ಧರಾಗಿ ಬಿಟ್ಟರು.

وَأَنَّهُ لَمَّا قَامَ عَبْدُ اللَّهِ يَدْعُوهُ كَادُوا يَكُونُونَ عَلَيْهِ لِبَدًا ﴿١٩﴾

20. ಸಂದೇಶವಾಹಕರೇ, ಹೇಳಿರಿ- "ನಾನಂತು ನನ್ನ ಪ್ರಭುವನ್ನು ಪ್ರಾರ್ಥಿಸುತ್ತೇನೆ ಮತ್ತು ಅವನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡುವುದಿಲ್ಲ."

قُلْ إِنَّمَا أَدْعُو رَبِّي وَلَا أُشْرِكُ بِهِ أَحَدًا ﴿٢٠﴾

21. ಹೇಳಿರಿ- "ನಿಮಗೆ ಯಾವುದೇ ಹಾನಿ ಮಾಡಲಿಕ್ಕಾಗಲಿ, ಯಾವುದೇ ಲಾಭವನ್ನುಂಟು ಮಾಡಲಿಕ್ಕಾಗಲಿ ನನಗೆ ಅಧಿಕಾರವಿಲ್ಲ."

قُلْ إِنِّي لَا أَمْلِكُ لَكُمْ ضَرًّا وَلَا رَشَدًا ﴿٢١﴾

22. ಹೇಳಿರಿ- "ನನ್ನನ್ನು ಅಲ್ಲಾಹನ ಹಿಡಿತದಿಂದ ಯಾರೂ ರಕ್ಷಿಸಲಾರರು ಮತ್ತು ನನಗೆ ಅವನ ಸನ್ನಿಧಿಯ ಹೊರತು ಬೇರೆಲ್ಲೂ ಅಭಯಾಶ್ರಯವೂ ಸಿಗಲಾರದು-

قُلْ إِنِّي لَنْ يُجِيرَنِي مِنَ اللَّهِ أَحَدٌ وَلَنْ أَجِدَ مِنْ دُونِهِ مُلْتَحَدًا ﴿٢٢﴾

23. ಅಲ್ಲಾಹನ ವಚನ ಮತ್ತು ಅವನ ಸಂದೇಶಗಳನ್ನು ತಲುಪಿಸುವ ಹೊರತು ಬೇರಾವ ಕರ್ತವ್ಯವೂ ನನ್ನ ಮೇಲಿಲ್ಲ. ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ಉಲ್ಲಂಘಿಸುವವರಿಗಾಗಿ ನರಕಾಗ್ನಿ ಇದೆ ಮತ್ತು ಇಂತಹವರು ಅದರಲ್ಲಿ ಸದಾಕಾಲ ಬಿದ್ದಿರುವರು."

إِلَّا بَلَاغًا مِنَ اللَّهِ وَرِسَالَاتِهِ ۚ وَمَنْ يَعْصِ اللَّهَ وَرَسُولَهُ فَإِنَّ لَهُ نَارَ جَهَنَّمَ خَالِدِينَ فِيهَا أَبَدًا ﴿٢٣﴾

24. ಇವರಿಗೆ ವಾಗ್ದಾನ ಮಾಡಲಾಗುತ್ತಿರುವುದನ್ನು ಕಣ್ಣಾರೆ ಕಂಡುಕೊಳ್ಳುವ ವರೆಗೂ (ಇವರು ತಮ್ಮ ಈ ನಿಲುಮೆಯನ್ನು ಕೈ ಬಿಡಲಾರರು) ಆಗ, ಯಾರ ಸಹಾಯಕರು ದುರ್ಬಲರು ಮತ್ತು ಯಾರ ಕೂಟವು ಅಲ್ಪಸಂಖ್ಯೆಯಲ್ಲಿದೆ ಎಂಬುದು ಅವರಿಗೆ ತಿಳಿದು ಬಿಡುವುದು.[7]

حَتَّىٰ إِذَا رَأَوْا مَا يُوعَدُونَ فَسَيَعْلَمُونَ مَنْ أَضْعَفُ نَاصِرًا وَأَقَلُّ عَدَدًا ﴿٢٤﴾

25. ಹೇಳಿರಿ- "ನಿಮಗೆ ಏನನ್ನು ವಾಗ್ದಾನ ಮಾಡಲಾಗುತ್ತಿದೆಯೋ ಅದು ಸಮೀಪವಿದೆಯೋ ಅಥವಾ ನನ್ನ ಪ್ರಭು ಅದಕ್ಕಾಗಿ ದೀರ್ಘವಾದ ಅವಧಿಯನ್ನೇನಾದರೂ ನಿಶ್ಚಯಿಸುವನೋ ಎಂಬುದು ನನಗೆ ತಿಳಿದಿಲ್ಲ.

قُلْ إِنْ أَدْرِي أَقَرِيبٌ مَا تُوعَدُونَ أَمْ يَجْعَلُ لَهُ رَبِّي أَمَدًا ﴿٢٥﴾

26. ಅವನು ಅದೃಶ್ಯಜ್ಞಾನಿಯಾಗಿದ್ದಾನೆ. ತನ್ನ ಅದೃಶ್ಯ ಜ್ಞಾನವನ್ನು ಅವನು ಯಾರಿಗೂ ತಿಳಿಯಪಡಿಸುವುದಿಲ್ಲ-

عَالِمُ الْغَيْبِ فَلَا يُظْهِرُ عَلَىٰ غَيْبِهِ أَحَدًا ﴿٢٦﴾

---

7. ಪ್ರವಾದಿವರ್ಯರು(ಸ) ಅಲ್ಲಾಹನ ಕಡೆಗೆ ಕರೆದಾಗ ಅವರ ಮೇಲೆ ಮುಗಿ ಬೀಳುತ್ತಿದ್ದ ಆ ಕಾಲದ ಕುರೈಶ್‌ನ ಜನರು, ನಮ್ಮದು ಅತ್ಯಂತ ಪ್ರಬಲವಾದ ಕೂಟ ಎಂಬ ಗುಮಾನಿಗೆ ಒಳಗಾಗಿದ್ದರು. ಪ್ರವಾದಿವರ್ಯರ(ಸ) ಬಳಿ ಹಿಡಿಯಷ್ಟು ಜನರು ಮಾತ್ರ ಇದ್ದಾರೆ. ಆದ್ದರಿಂದ ನಾವು ಅವರನ್ನು ಸುಲಭವಾಗಿ ಸೋಲಿಸಿ ಬಿಡುವೆವು ಎಂದು ಅವರು ಭಾವಿಸಿದ್ದರು.

27. (ಅದೃಶ್ಯಜ್ಞಾನವನ್ನು ನೀಡಲಿಕ್ಕಾಗಿ) ತಾನು ಮೆಚ್ಚಿಕೊಂಡ, ತನ್ನ ಸಂದೇಶವಾಹಕನ ಹೊರತು.[8] ಆಗ ಅವನ(ಸಂದೇಶವಾಹಕನ) ಮುಂದೆಯೂ ಹಿಂದೆಯೂ ಕಾವಲುಗಾರರನ್ನು ನೇಮಿಸಿ ಬಿಡುತ್ತಾನೆ-[9]	إِلَّا مَنِ ارْتَضَىٰ مِن رَّسُولٍ فَإِنَّهُۥ يَسْلُكُ مِنۢ بَيْنِ يَدَيْهِ وَمِنْ خَلْفِهِۦ رَصَدًا ﴿٢٧﴾
28. ಅವರು ತಮ್ಮ ಪ್ರಭುವಿನ ಸಂದೇಶಗಳನ್ನು ತಲುಪಿಸಿರುವರೆಂಬುದನ್ನು ಅವನು ತಿಳಿಯಲಿಕ್ಕಾಗಿ.[10] ಅವನು ಅವರ ಪರಿಸರವನ್ನು ಸಂಪೂರ್ಣವಾಗಿ ಸುತ್ತುಗಟ್ಟಿರುತ್ತಾನೆ ಮತ್ತು ಪ್ರತಿಯೊಂದು ವಸ್ತುವನ್ನೂ ಅವನು ಲೆಕ್ಕ ಮಾಡಿಟ್ಟಿರುತ್ತಾನೆ."[11]	لِّيَعْلَمَ أَن قَدْ أَبْلَغُوا۟ رِسَٰلَٰتِ رَبِّهِمْ وَأَحَاطَ بِمَا لَدَيْهِمْ وَأَحْصَىٰ كُلَّ شَىْءٍ عَدَدًۢا ﴿٢٨﴾

8. ಅರ್ಥಾತ್- ಪ್ರವಾದಿ ಸ್ವತಃ ಪರೋಕ್ಷದ ಜ್ಞಾನಿಯಾಗಿರುವುದಿಲ್ಲ. ಬದಲಾಗಿ ಅಲ್ಲಾಹನು ಅವರನ್ನು ಪ್ರವಾದಿತ್ವಕ್ಕೆ ಆಯ್ಕೆ ಮಾಡಿದಾಗ ಪರೋಕ್ಷದ ವಾಸ್ತವಿಕತೆಗಳ ಪೈಕಿ ತಾನಿಚ್ಛಿಸುವುದರ ಜ್ಞಾನವನ್ನು ಅವರಿಗೆ ದಯಪಾಲಿಸುತ್ತಾನೆ.
9. ಕಾವಲುಗಾರರು ಎಂದರೆ ದೇವಚರರಾಗಿದ್ದಾರೆ. ಅರ್ಥಾತ್ ಪರೋಕ್ಷದ ಜ್ಞಾನವನ್ನು ನೀಡುವಾಗ ಅದರ ಸಂರಕ್ಷಣೆ ಮಾಡಲಿಕ್ಕಾಗಿ ಅಲ್ಲಾಹನು ಎಲ್ಲಾ ಕಡೆಗಳಲ್ಲೂ ದೇವಚರರನ್ನು ನೇಮಕ ಗೊಳಿಸುತ್ತಾನೆ. ಆ ಜ್ಞಾನ ಅತ್ಯಂತ ಸುರಕ್ಷಿತವಾಗಿ ಪ್ರವಾದಿಗೆ ತಲುಪಲಿ ಮತ್ತು ಅದರಲ್ಲಿ ಯಾವುದೇ ರೀತಿಯ ಸೇರ್ಪಡೆಯಾಗದಿರಲಿ ಎಂಬುದೇ ಇದರ ಉದ್ದೇಶ.
10. ಪ್ರವಾದಿತ್ವದ ಕರ್ತವ್ಯವನ್ನು ನಿರ್ವಹಿಸಲಿಕ್ಕಾಗಿ ಅಪೇಕ್ಷಣೀಯವಾದ ಪರೋಕ್ಷದ ಜ್ಞಾನವನ್ನು ಪ್ರವಾದಿಗಳಿಗೆ ನೀಡಲಾಗುತ್ತದೆ. ಆ ಜ್ಞಾನ ಪ್ರವಾದಿಗಳಿಗೆ ಯಥಾವತ್ತಾಗಿ ತಲಪಿದೆಯೇ ಎಂಬ ಬಗ್ಗೆ ದೇವಚರರು ಮೇಲ್ನೋಟವನ್ನೂ ವಹಿಸುತ್ತಾರೆ. ಹಾಗೆಯೇ ಪ್ರವಾದಿಗಳು ದೇವನ ಸಂದೇಶವನ್ನು ಅವನ ದಾಸನ ಕಡೆಗೆ ಯಥಾರೂಪದಲ್ಲಿ ತಲುಪಿಸಿದ್ದಾರೆಯೇ ಎಂದೂ ನೋಡುತ್ತಾರೆಂದು ಇದರಿಂದ ವ್ಯಕ್ತವಾಗುತ್ತದೆ.
11. ಅರ್ಥಾತ್- ಪ್ರವಾದಿಗಳ ಮತ್ತು ದೇವಚರರ ಮೇಲೆ ಅಲ್ಲಾಹನ ಸಾಮರ್ಥ್ಯ ಎಷ್ಟು ಆವರಿಸಿ ಕೊಂಡಿರುತ್ತದೆ ಎಂದರೆ ಅವರು ಕೂದಲೆಳೆಯಷ್ಟಾದರೂ ಅವನಿಚ್ಛೆಯಿಂದ ಸರಿದರೆ ತಕ್ಷಣ ಅವನ ಹಿಡಿತಕ್ಕೆ ಒಳಗಾಗುತ್ತಾರೆ. ಅಲ್ಲಾಹನು ಕಳುಹಿಸುವ ಸಂದೇಶದ ಪ್ರತಿಯೊಂದು ಪದವೂ ಎಣಿಸಲ್ಪಟ್ಟಿದೆ. ಆದ್ದರಿಂದ ಅದರಲ್ಲಿ ಒಂದು ಪದದ ವ್ಯತ್ಯಾಸ ಮಾಡಲಿಕ್ಕೂ ಪ್ರವಾದಿಗಳಿಗೆ ಅಥವಾ ದೇವಚರರಿಗೆ ಸಾಧ್ಯವಿಲ್ಲ.